# 10

# ಯೇಸು ಶಿಷ್ಯರ ಪಾದಗಳನ್ನು ತೊಳೆದಾಗ

## (ಯೋಹಾನ 13:1-17)

*ಪರಿವರ್ತನೆಯ ಜೀವಿತವು ಸೇವೆಯ ಜೀವಿತವಾಗಿದೆ ...*

ಯೇಸು ಅರಸನಾಗಿದ್ದನು. ನಾವು ಅರಸನ ಬಗೆಗೆ ಯೋಚಿಸುವಾಗ ಸಿಂಹಾಸನದ ಮೇಲೆ ಕೂತಿಕೊಂಡಿರುವ, ವಿಜಯಿಯಾದ ಸೇನೆಯ ಮುಂದೆ ಕುದುರೆಸವಾರಿ ಮಾಡುತ್ತಿದ್ದ ಅಥವಾ ಕಿರೀಟ ರಾಜಪೋಷಾಕ ಧರಿಸಿ ಜಯಘೋಷ ಮಾಡುತ್ತಿರುವ ಜನಜಂಗುಳಿಯ ಮುಂದೆ ಇರುವ ಒಬ್ಬ ಮನುಷ್ಯನನ್ನು ನಾವು ಯೋಚಿಸುವವರಾಗಿರುತ್ತೇವೆ.

ಆದರೆ ಯೋಹಾನ 13ರಲ್ಲಿ ನಾವು ನೋಡುವಂತ ನಮ್ಮ ಅರಸನು ವಿಭಿನ್ನವಾಗಿದ್ದಾನೆ: ಶಿಷ್ಯರ ಮುಂದೆ ಮೊಣಕಾಲೂರಿ ಕೈಪಾವುಡವನ್ನು ಹೊದ್ದುಕೊಂಡು ಮತ್ತು ಅವರ ಕಾಲನ್ನು ತೊಳೆಯುತ್ತಿದ್ದಾನೆ. ಒಂದು ಸಂದರ್ಭದಲ್ಲಿ ಗ್ರೀಕರು "ಅಯ್ಯಾ ಯೇಸುವನ್ನು ನೋಡಬೇಕೆಂದಿದ್ದೇವೆ" (ಯೋಹಾನ 12:21) ಎಂದು ಹೇಳಿದರು. ಯಾವ ತರದ ಯೇಸುವನ್ನು ನಾವಿಲ್ಲಿ ನೋಡುತ್ತಿದ್ದೇವೆ? ಆತನು ಇಲ್ಲಿ ಸೇವೆಗಾಗಿ ನಿಯೋಗಿಸಲ್ಪಟ್ಟ ಉದಾಹರಣೆಯಾಗಿ ಇಲ್ಲಿ ಇರಿಸಲಟ್ಟಿದ್ದಾನೆ! ಈ ಘಟನೆಯ ಬಗೆಗೆ ಮೂರು ಪ್ರಶ್ನೆಗಳನ್ನು ಕೇಳೋಣ.

### ಯೇಸು ಯಾಕೆ ಈ ಉದಾಹರಣೆಯನ್ನು ಕೊಟ್ಟನು?

ಈ ಪ್ರಶ್ನೆಗೆ ಯೋಗ್ಯವೆನಿಸಲು ಸಾಧ್ಯವಾದ ಎರಡು ಉತ್ತರಗಳು ಇವೆ. ಒಂದು: ಆ ಹನ್ನೆರಡು ಜನರಿಗೆ ಯೇಸು ಕಲಿಸಿದ ಆ ಪಾಠದ ಅವಶ್ಯಕತೆಯು ಇತ್ತು ಯಾಕೆಂದರೆ ಶಿಷ್ಯನ ಗುರುತು ಸೇವೆ ಎನ್ನುವದನ್ನು ಅವರು ಇನ್ನೂ ಅರಿತುಕೊಂಡಿರಲಿಲ್ಲ. ಇತ್ತೀಚಿನ ಸಂದರ್ಭದಲ್ಲಿ, ಅಪೊಸ್ತಲರಲ್ಲಿ ದೇವರ ರಾಜ್ಯದಲ್ಲಿ ಯಾರು ದೊಡ್ಡವರು ಎಂಬ ವಿಷಯದಲ್ಲಿ ವಾದವು ನಡೆದಿತ್ತು, ಮತ್ತು ಯೇಸು ಅವರಿಗೆ "ನಿಮ್ಮಲ್ಲಿ ಮೊದಲಿನವನಾಗಬೇಕೆಂದವನು ಎಲ್ಲರ ಸೇವಕನಾಗಬೇಕು" ಎಂದು ಹೇಳಿದನು. (ನೋಡಿ ಮಾರ್ಕ 10:35-45; ಮತ್ತಾಯ 20:20-28.) ಆದರೆ ಇನ್ನೂ ಅವರು ಪಾಠವನ್ನು ಕಲಿತಿರಲ್ಲಿ. ಕಡೆಯ ಭೋಜನದ ಸಮಯದಲ್ಲೂ ಕೂಡಾ ದವರ ರಾಜ್ಯದಲ್ಲಿ ಯಾರು ಶ್ರೇಷ್ಟರು ಎಂದು ಅವರು ಚರ್ಚಿಸುತ್ತಿದ್ದರು. ಕಡೆಯ ಭೋಜನದ ಆಚರಣೆಯ ನಂತರ ಲೂಕನು ನಮಗೆ ಹೀಗೆ ಹೇಳುತ್ತಾನೆ,

> ಇದಲ್ಲದೆ ಯಾವನು ಹೆಚ್ಚಿನವನು ಎಂಬ ವಿಷಯದಲ್ಲಿ ಅವರೊಳಗೆ ಚರ್ಚೆಯು ಹುಟ್ಟಿತು. ಆಗ ಆತನು ಅವರಿಗೆ ಅನ್ಯದೇಶದ ಅರಸರು ತಮ್ಮ ತಮ್ಮ ಜನಗಳ ಮೇಲೆ ದೊರೆತನ ಮಾಡುತ್ತಾರೆ ಮತ್ತು ಅವರ ಮೇಲೆ ಅಧಿಕಾರ ನಡೆಸುವವರು ಧರ್ಮಿಷ್ಟರೆನಿಸಿಕೊಳ್ಳುತ್ತಾರೆ. ನೀವು ಹಾಗಿರಬಾರದು; ನಿಮ್ಮಲ್ಲಿ ಹೆಚ್ಚಿನವನು ಚಿಕ್ಕವನಂತನಾಗಬೇಕು, ಮುಖ್ಯಸ್ಥನು ಸೇವಕನಂತಾಗಬೇಕು. ಯಾವನು ಹೆಚ್ಚಿನವನು; ಊಟಕ್ಕೆ ಕೂತವನೋ ಸೇವೆಮಾಡುವವನೋ? ಊಟಕ್ಕೆ ಕೂತವನಲ್ಲವೇ. ಆದರೆ ನಾನು ನಿಮ್ಮಲ್ಲಿ ಸೇವೆ ಮಾಡುವವನಂತಿದ್ದೇನೆ (ಲೂಕ 22:24-27).

ಶಿಷ್ಯರ ಪಾಪಗಳನ್ನು ತೊಳೆಯುವದು ಬಹುಶ ಶಿಷ್ಯರಲ್ಲಿ ಯಾರು ದೊಡ್ಡವರು ಎಂಬ ವಾದವನ್ನನುಸರಿಸಿ ಮಾಡಿದ್ದಾಗಿರಬಹುದು ಅದಕ್ಕೆ: "ನಾನು ನಿಮ್ಮಲ್ಲಿ ಸೇವ ಮಾಡುವವನಂತಿದ್ದೇನೆ" ಎಂಬ ಯೇಸುವಿನ ಮಾತುಗಳು ಜೊತೆಕೊಡುತ್ತಿವೆ.

ಅಪೊಸ್ತಲರು ಮೂರು ವರ್ಷಗಳಿಂದ ಯೇಸುವಿನೊಂದಿಗೆ ಇದ್ದರೂ ಕೂಡಾ ಯೇಸು ದೇವರ ರಾಜ್ಯದ ಬಗೆ ಕಲಿಸಿದಂತಹ ಶ್ರೇಷ್ಟ ಸಂಗತಿಗಳನ್ನು ಇನ್ನು ಅರಿತಿರಲ್ಲಿ, ಅಥವಾ ಸೇವೆಯ ಅರ್ಥವನ್ನು ಅರಿತಿರಲಿಲ್ಲ. ಅವರು ಇನ್ನು ಯಾರು ಮಹತ್ವವುಳ್ಳ ಅಪೊಸ್ತಲರೆಂಬುದಕ್ಕೆ ಯೋಗ್ಯರು ಎಂಬುದರ ಬಗೆಗೆ ವಾದಿಸುವವರಾಗಿದ್ದರು. ಪ್ರತಿಯೊಬ್ಬನೂ ತಾನೇ ಶ್ರೇಷ್ಟನು ಎಂದು ಪ್ರತಿಪಾದಿಸಲು ಯಾವುದೋ ಒಂದು ವಾದವನ್ನು ಇಡಲು ಬಯಸುವವರಾಗಿದ್ದರು.

ಮೇಲಾಗಿ, ಯೇಸುವಿನ ಜೀವಿತದ ಅಂತಿಮ ಘಟ್ಟಕ್ಕೆ ತಾವು ಬಂದಿರುವುದಾಗಿ ಅವರು ಅರ್ಥೈಸಿಕೊಂಡಿದ್ದರು. ಯೇಸು ತಾನು ಮರಣಹೊಂದಲಿರುವುದಾಗಿ ಅವರಿಗೆ ಹೇಳಿದ್ದನು; ಆದ್ದರಿಂದ ಈ ಅಧಿಕಾರದ ವಿಷಯವನ್ನು ಪಡೆಯುವದು ಮಹತ್ವದ್ದಾಗಿದೆ ಮತ್ತು ತಡವಾಗುವುದಕ್ಕಿಂತ ಮೊದಲೇ ಅದನ್ನು ಮೊದಲೇ ಸರಿಮಾಡಿಕೊಳ್ಳುವದು ಒಳ್ಳೆಯದು ಎಂದು ಅವರು ನಂಬಿರಬಹುದು.

ಈಗ ಅವರು ಮಹತ್ವದ ಊಟವನ್ನು ಮಾಡಲು ಒಟ್ಟಾಗಿ ಸೇರಿ ಬಂದಿದ್ದಾರೆ. ಅದಕ್ಕಾಗಿ ವಿಶೇಷ ಸಿದ್ಧತೆಯು ಮಾಡಲ್ಪಟ್ಟಿತ್ತು. ಆದರೆ ಅಲ್ಲಿ ಸೇವಕರು ಇರಲಿಲ್ಲ. ಸಾಮಾನ್ಯವಾಗಿ ಸೇವಕನು ಅತಿಥಿಗಳ ಪಾದಗಳನ್ನು ತೊಳೆಯುತ್ತಿದ್ದನು ಅಥವಾ ಅತಿಥಿಗಳು ಕಾಲನ್ನು ತೊಳೆದುಕೊಳ್ಳಲು ಅವರಿಗೆ ನೀರನ್ನು ಒದಗಿಸುತ್ತಿದ್ದನು. ಅಪೊಸ್ತಲರು ಇದನ್ನು ಗಮನಿಸಿದರು: ಅವರ ಪಾದಗಳು ತೊಳೆಯಲ್ಪಡುವದಕ್ಕೆ ಸಹಾಯದ ಅವಶ್ಯಕತೆಯು ಇದೆ ಎಂದು ಅವರಿಗೆ ತಿಳಿದುದರಲ್ಲಿ ಸಂಶಯವೇ ಇಲ್ಲ. ಆದರೆ ಇದು ಸೇವಕನ ಕೆಲಸವಾಗಿತ್ತು! ಅವರಲ್ಲಿ ಯಾರೊಬ್ಬರೂ ತಗ್ಗಿಸಿಕೊಂಡು ಆ ಕೆಲಸಮಾಡಲು ಸಿದ್ಧರಿರಲಿಲ್ಲ, ಪ್ರತಿಯೊಬ್ಬನೂ ತಮ್ಮ ಶ್ರೇಷ್ಟತೆಯನ್ನು ತ್ಯಜಿಸಲು ಯಾರು ಸಿದ್ಧರಿರಲಿಲ್ಲ. ಆದ್ದರಿಂದ ಆ ಕಾರ್ಯವು ಮಾಡದೇ ಹಾಗೆಯೇ ಉಳಿಯಿತು. ಇತರರ ಪಾದಗಳನ್ನು ತೊಳೆಯುವಂಥದ್ದು ಎಂದರೆ ಅವರ ಲೆಕ್ಕದಲ್ಲಿ ಕೀಳರಿಮೆಯನ್ನು ಒಪ್ಪಿಕೊಂಡಂತೆ ಎಂದಾಗುವದು. ಅಪೊಸ್ತಲರಿಗೆ ಈ ತರದ ಪಾಠದ ಅವಶ್ಯಕತೆಯು ಇತ್ತು!

"ಯಾಕೆ?" ಎಂಬ ಪ್ರಶ್ನೆಗೆ ಇನ್ನೊಂದು ಉತ್ತರವು ಅಲ್ಲಿದೆ. ಯೇಸುವಿನ ಈ ಉದಾಹರಣೆಯು, ಕೇವಲ ಶಿಷ್ಯರಿಗೆ ಅವಶಯಿದೆ ಎಂಬುದು ಮಾತ್ರವಲ್ಲ ಆದರೆ ಅದ ಅವರಿಗೋಸ್ಕರದ ಆತನ ಪ್ರೀತಿಯು ಆಗಿತ್ತು, ಆ ಮೊತ್ತವು ಈ ರೀತಿಯಲ್ಲಿ ಪರಿಚಯಿಸ್ಪಟ್ಟಿದೆ:

> ಪಸ್ಕಹಬ್ಬದ ಮುಂದೆ ಯೇಸು ತಾನು ಈ ಲೋಕವನ್ನು ಬಿಟ್ಟು ತಂದೆಯ ಬಳಿಗೆ ಹೋಗಬೇಕಾದ ಕಾಲಬಂತೆಂದು ತಿಳಿದುಕೊಂಡು ಲೋಕದಲ್ಲಿರುವ ತನ್ನವರನ್ನು ಪ್ರೀತಿಸಿ ಪರಿಪೂರ್ಣವಾಗಿ ಅವರನ್ನು ಪ್ರೀತಿಸುತ್ತಾ ಬಂದನು (ಯೋಹಾನ 13:1).

ಯೇಸು ಈ ಉದಾಹರಣೆಯನ್ನು ಸಹ ಕೊಟ್ಟನು ಯಾಕೆಂದರೆ ಆತನ ಅಂತ್ಯವು ಸಮೀಪಿಸಿತು; ಯೋಹಾನನು ಹೀಗೆ ಹೇಳುತ್ತಾನೆ:

> ಅವರು ಊಟಕ್ಕೆ ಕೂತುಕೊಂಡಿದ್ದರು; ಅಷ್ಟರೊಳಗೆ ಸೈತಾನನು ಸೀಮೋನನ ಮಗನಾದ ಇಸ್ಕರಿಯೋತ ಯೂದನ ಮನಸ್ಸಿನಲ್ಲಿ ಯೇಸುವನ್ನು ಹಿಡುಕೊಡಬೇಕೆಂಬ ಆಲೋಚನೆಯನ್ನು ಹುಟ್ಟಿಸಿದ್ದನು. ಯೇಸು ತನ್ನ ಕೈಯಲ್ಲಿ ತಂದೆ ಎಲ್ಲವನ್ನೂ ಕೊಟ್ಟಿದ್ದಾನೆಂತಲೂ ತಾನು ದೇವರಿಂದ ಹೊರಟು ಬಂದಿದ್ದು ಮತ್ತೇ ದೇವರ ಬಳಿಗೆ ಹೋಗುತ್ತೇನೆಂತಲೂ ತಿಳುಕೊಂಡವನಾಗಿ ಊಟವನ್ನು ಬಿಟ್ಟು ಎದ್ದು ಹೊದ್ದಿದ್ದ ಮೇಲ್ಹೊದಿಕೆಯನ್ನು ತೆಗೆದಿಟ್ಟು ಕೈ ಪಾವುಡವನ್ನು ತಕ್ಕೊಂಡನು (ಯೋಹಾನ 13:2, 3).

ಅಂಥ ಸಮಯದಲ್ಲಿ ಯೇಸು ಈ ಕಾರ್ಯದ ಮೂಲಕ ತನ್ನ ಶಿಷ್ಯರಿಗೆ ವಾಕ್ಯದಿಂದಾಗಲಿ ಅಥವಾ ಕಾರ್ಯದಿಂದಾಗಲಿ ಅರ್ಥಗರ್ಭಿತವಾಗಿ ಮಹತ್ವವಾಗಿದೆ ಎಂದು ಯೋಚಿಸುವಂತಹ ಯಾವುದೇ ಸಂದೇಶವನ್ನು ಕೊಡಲು ಯೋಚಿಸಿದ್ದನು.

ಯೇಸು ಮರಣ ಹೊಂದಲಿಕ್ಕಿರುವುದರಿಂದ, ಮತ್ತು ಆತನು ತನ್ನ ಶಿಷ್ಯರನ್ನು ಪ್ರೀತಿ ಸುತ್ತಿದದರಿಂದ ತಾನು ಲೋಕವನ್ನು ಬಿಡುವುದಕ್ಕಿಂತ ಮುಂಚೆ ಅರ್ಥಗರ್ಭಿತವಾದ ಮಹತ್ವದ ಪಾಠವನ್ನು ಅವರಿಗೆ ಹಿಂದೆಬಿಟ್ಟು ಹೋಗಲು ಬಯಸಿದನು. ಯೇಸು ಅವರಾವರ ಪಾದಗಳನ್ನು ತೊಳೆಯುವಾ ಯೇಸು ಈ ಪಾಠವನ್ನು ಅವರಿಗೆ ಕಲಿಸುತ್ತಾನೆ.

## ಯಾವ ಉದಾಹರಣೆಯ ಅವಶ್ಯಕತೆಯು ಶಿಷ್ಯರಿಗಿತ್ತು?

ಯೋಹಾನ 13:3-17ರಲ್ಲಿನ ಕಥೆಯನ್ನು ಓದುತ್ತಾ ಆ ಪ್ರಶ್ನೆಗೆ ಉತ್ತರಿಸಲು ಪ್ರಾರಂಭಿಸೋಣ.

ಶಿಷ್ಯರಿಗೆ ತನ್ನ ಉದಾಹರಣೆಯನ್ನು ಅನುಸರಿಸುವ ಅವಶ್ಯಕತೆಯು ಇದೆ ಎಂದು ಯೇಸು ನಾಲ್ಕು ಸಾರಿ ಹೇಳಿದನು: "ನೀವು ಸಹ ಒಬ್ಬರ ಕಾಲನ್ನು ತೊಳೆಯುವ ಹಂಗಿನವರಾಗಿದ್ದೀರಿ" (ವಚನ 14); "ನಾನು ನಿಮಗೆ ಮಾಡಿದ ಮೇರೆಗೆ ಸಹ ಮಾಡುವಂತೆ ನಿಮಗೆ ಮಾರಿಯನ್ನು ತೋರಿಸಿದ್ದೇನೆ" (ವಚನ 15); "ದಣಿಗಿಂತ ಆಳು ದೊಡ್ಡವನಲ್ಲ" (ವಚನ 16). ಇನ್ನೊಂದು ಮಾತಿನಲ್ಲಿ, ಆತನು ನಾನು ಸೇವೆ ಮಾಡುವುದಾದರೆ ಅದನ್ನು ಎಷ್ಟರ ಮಟ್ಟಿಗೆ ಕೆಳಕ್ಕಿಳದು ಸೇವೆಮಾಡಬಹುದು? ಎಂದು ಆತನು ಹೇಳುತ್ತಾನೆ. "ನೀವು ಇದನ್ನು ತಿಳಿದುಕೊಂಡು ಇದನ್ನು ಮಾಡಿದರೆ ನೀವು ಧನ್ಯರು" (ವಚನ 17).

ಆದರೆ ಈ ಉದಾಹರಣೆಯನ್ನು ಅವರು ಎಲ್ಲಿ ಉಪಯೋಗಿಸಬಹುದು? ಯೇಸು ಶಿಷ್ಯರ ಪಾದಗಳನ್ನು ಯಾವುದಕ್ಕೋಸ್ಕರ ತೊಳೆದ ಅವರಿಗೋಸ್ಕರ ಉದಾಹರಣೆ ಯಾಗಬಯಸಿದನು?

ಚರ್ಚಿನಲ್ಲಿ ಬಳಸುವ ಆಚರಣೆಗಳನ್ನು ಆಚರಿಸಲು ಒಂದು ಉದಾಹರಣೆಯಾಗಿರಲು ಎಂದು ಕೆಲವರು ನಂಬುತ್ತಾರೆ. ಇಂದೂ ಕೂಡಾ ಕೆಲ ಚರ್ಚುಗಳಲ್ಲಿ "ಕಾಲು ತೊಳೆ ಯುವಂತಹ" ಕೆಲ ಅಭ್ಯಾಸಗಳು ನಿಶ್ಚಿತ ಸಂದರ್ಭಗಳಲ್ಲಿ ಅವರ ಆರಾಧನೆಯ ಒಂದು ಭಾಗವಾಗಿ ಪರಿಣಮಿಸಲ್ಪಟ್ಟಿದೆ.

ಆದರೆ ಯೇಸುವಿನ ಉದಾಹರಣೆಗೂ ಅಂಥ ಧಾರ್ಮಿಕ ಆಚರಣೆಗಳಿಗೂ ಯಾವುದೇ ಸಂಬಂಧವಿಲ್ಲ. ಆ ಕಾಲದಲ್ಲಿ ಕಾಲನ್ನು ತೊಳೆಯುವದು ದಿನಂಪ್ರತಿಯ ಕಾರ್ಯಕ್ರಮವಾಗಿದ್ದು, ಜನರು ದೂಳಮಯವಾದ ರಸ್ತೆಯಲ್ಲಿ ಪ್ರಯಾಣಿಸುತ್ತಿದ್ದರು ಮತ್ತು ಆ ಕಾರಣದಿಂದ ವಾಸ್ತವವಾಗಿ ಅವರ ಚಪ್ಪಲಿಗಳು ಕಾಲುಗಳು ಕೊಳೆಯಾಗುದರಿಂದ ರಕ್ಷಿಸುವಲ್ಲಿ ವಿಫಲ ವಾಗಿದ್ದರಿಂದ ಇದು ಅವಶ್ಯವಾಗಿತ್ತು. ಪ್ರಯಾಣದ ನಂತರ, ನೀನು ಮನೆಯನ್ನು ಪ್ರವೇಶಿ ಸುವಾಗ ಪಾದಗಳನ್ನು ತೊಳೆದುಕೊಳ್ಳುವ ಅವಕಾಶವು ಇರುತ್ತಿತ್ತು ಅಥವಾ ಅದಕ್ಕಿಂತ ಉತ್ತಮವಾದದ್ದೆಂದರೆ ಕೂತುಕೊಳ್ಳುವ (ಅಥವಾ ಆಶ್ರಯಿಸ್ಕೊಳ್ಳಲು) ಸಮರ್ಥನಾಗುತ್ತಿದ್ದೆ ಮತ್ತು ಸೇವಕನು ನಿನ್ನ ಪಾದಗಳನ್ನು ತೊಳೆಯುತ್ತಿದ್ದನು ಇದರಿಂದ ಉಲ್ಲಾಸಗೊಳ್ಳಲು ಸಹಾಯಿಸುತ್ತಿತ್ತು. ಇದಕ್ಕೆ ವ್ಯತ್ಯಾಸವೆಂದರೆ, ಆ ಅವಕಾಶವನ್ನು ನೀವು ಹೊಂದದೇ ಹೋದರೆ ನಿನ್ನ ಭೇಟಿಯುದ್ದದ ನಿನ್ನ ಅಸೌಖ್ಯತೆಯು ನಿನ್ನನ್ನು ಬಿಟ್ಟುಹೋಗುತ್ತಿರಲಿಲ್ಲ.

"ಯೇಸು ಶಿಷ್ಯರ ಪಾದಗಳನ್ನು ಯಾಕೆ ತೊಳೆದನು?" ಎಂಬ ಪ್ರಶ್ನೆಗೆ "ಅವರ ಕಾಲುಗಳು ಹೊಲಸಾಗಿತ್ತು!" ಅವರಿಗೆ ಸ್ವಚ್ಛಮಾಡಲ್ಪಡುವದು ಅವಶ್ಯವಾಗಿತ್ತು ಎಂದು ಹೇಳುವ ಉತ್ತರವು ಸಿಕ್ಕಬಹುದು!

ಹೀಗೆ, ಬೈಬಲ್‌ನಲ್ಲಿ ಪಾದಗಳನ್ನು ತೊಳೆಯುವದು ಯಾವಾಗಲೂ ಸೇವೆಯ, ಅತಿಥ್ಯದ, ಮತ್ತು ಒಳ್ಳೆಯ ಕಾರ್ಯಗಳ ಸಂದರ್ಭದಲ್ಲಿ ಯಾವಾಗಲೂ ಇಡುವಂತದ್ದಾಗಿದೆ. ಅಬ್ರಹಾಮನು

ಮಮ್ರೆಯಲ್ಲಿ ಓಕ್‌ಮರದ ಕೆಳಗೆ ಆ ಮೂವರು ಅತಿಥಿಗಳಿಗೆ ಅಥಿತ್ಯವನ್ನು ತೋರಿಸಿದಾಗ ಆತನು ಅವರ ಪಾದಗಳನ್ನು ತೊಳೆದನು (ಆದಿಕಾಂಡ 18:4). ಸೊದೋಮಿನಲ್ಲಿಯ ತನ್ನ ಮನೆಗೆ ಬಂದ ಕರ್ತನ ಸಂದೇಶಕರನ್ನು ಲೋಟನು ಸ್ವಾಗತಿಸಿದಾಗ, ಆತನು "... ಬಂದು ಇಳುಕೊಂಡು ಕೊಲುಗಳನ್ನು ತೊಳಕೊಳ್ಳಿರಿ" (ಆದಿಕಾಂಡ 19:2) ಎಂದು ಹೇಳಿದನು. ಲಾಬಾನನು ಅಬ್ರಾಮನ ಸೇವಕರನ್ನು ತನ್ನ ಮನೆಗೆ ಸ್ವಾಗತಿಸಿದಾಗ, "ಕಾಲುಗಳನ್ನು ತೊಳೆಯುವುದಕ್ಕೆ ನೀರನ್ನು ತರಿಸಿದನು" (ಆದಿಕಾಂಡ 24:32). ಯೋಸೇಫನ ಅಣ್ಣಂದಿರು ಎರಡನೆಯ ಸಾರಿ ಐಗಪ್ತಕ್ಕೆ ಬಂದಾಗ ಯೋಸೇಫನು ಅವರಿಗೆ ನೀರನ್ನು ಕೊಟ್ಟನು, ಮತ್ತು ಅವರು ತಮ್ಮ ಕಾಲುಗಳನ್ನು ತೊಳೆದರು (ಆದಿಕಾಂಡ 43:24). ಗಿಬೆಯದ ಒಬ್ಬ ವೃದ್ಧನು ಇಬ್ಬರು ಆಗುಂತಕರನ್ನು ತನ್ನ ಮನೆಗೆ ಕರತರುವ ಮೂಲಕ ಮತ್ತು ಅವರಿಗೆ ವ್ಯವಸ್ಥೆಯನ್ನು ಮಾಡುವುದರ ಮೂಲಕ ಅತಿಥ್ಯವನ್ನು ತೋರಿಸಿದನು; ದಾಖಲೆಯು ಹೇಳುವಂತೆ, "ತಮ್ಮ ಕೈಕಾಲುಗಳನ್ನು ತೊಳೆದುಕೊಂಡು ಅಲ್ಲಿ ಅನ್ನಪಾನಗಳನ್ನು ತೆಗೆದುಕೊಂಡರು" (ನ್ಯಾಯಸ್ಥಾಪಕ 19:21). ದಾವೀದನು ಅಬಿಗೈಲಳನ್ನು ತನ್ನ ಹೆಂಡತಿಯನ್ನಾಗಿ ಮಾಡಿಕೊಳ್ಳಲು ಕರೆ ಕಳುಹಿದಾಗ ಆಕೆಯು ತಾನು ಸೇವೆಯನ್ನು ಮಾಡಲು ಸಿದ್ಧಳಿರುವುದಾಗಿ ಹೇಳಿ, "ನಿನ್ನ ದಾಸಿಯಾದ ನಾನು ನನ್ನ ಸ್ವಾಮಿಯ ಸೇವಕನ ಪಾದಗಳನ್ನು ತೊಳೆಯುವ ಸೇವಕಿಯಾಗಲು ಸಿದ್ಧಳಿದ್ದೇನೆ" ಎಂದು ಉತ್ತರಿಸಿದಳು (1 ಸಮುವೇಲ 25:41). ಯೇಸು ಫರಿಸಾಯನ ಮನೆಯಲ್ಲಿ ಊಟಮಾಡುತ್ತಿದ್ದಾಗ ಆತನು, "ನಾನು ನಿನ್ನ ಮನೆಗೆ ಬಂದಾಗ ನೀನು ನನ್ನ ಕಾಲಿಗೆ ನೀರುಕೊಡಲಿಲ್ಲ" (ಲೂಕ 7:44) ಎಂದು ಹೇಳಿದನು. ಪೌಲನು ಎಂಥ ವಿಧವೆಯರನ್ನು ಪಟ್ಟಿಯಲ್ಲಿ ಸೇರಿಸಬೇಕೆಂದು ಹೇಳುತ್ತಾ "ಸತ್ಕ್ರಿಯೆಗಳನ್ನು" ಮಾಡುವವಳೆಂದು ಹೆಸರುಗೊಂಡವಳೂ ಆಗಿರಬೇಕು; ಅಂದರೆ ಮಕ್ಕಳನ್ನು ಸಾಕಿದವಳಾಗಲಿ ಅತಿಥಿಸತ್ಕಾರವನ್ನು ಮಾಡಿದವಳಾಗಲಿ ದೇವಜನರಿಗೆ ಉಪಚಾರ ಮಾಡಿದವಳಾಗಲಿ ಎಲ್ಲಾ ಸತ್ಕಾರ್ಯಗಳಾಗಲಿ ಆಗಿರಬೇಕು (1 ತಿಮೋಥೆ 5:10).

ಪಾದಗಳನ್ನು ತೊಳೆಯುವದು ಅತಿಥಿ ಸತ್ಕಾರ ಮತ್ತು ಸೇವೆಮಾಡುವದು ಆಗಿದೆ ಹೊರತು ಆರಾಧನೆಯ ಕಾರ್ಯವಲ್ಲ ಅಥವಾ ಧಾರ್ಮಿಕ ಆಚರಣೆಯೂ ಅಲ್ಲ. ಚರ್ಚಿನ ಆರಾಧನೆಯನೆಯ ಭಾಗವಾಗಿ ಆಚರಿಸಲು ಯೇಸು ಇಲ್ಲಿ ಅದನ್ನು ಉದಾಹರಣೆಯಾಗಿ ಇಟ್ಟಿಲ್ಲ.

ಯಾವ ರೀತಿಯಲ್ಲಿ ತನ್ನ ಉದಾಹರಣೆಯನ್ನು ಅನುಸರಿಸಲು ಯೇಸು ತನ್ನ ಶಿಷ್ಯರಿಗೆ ಸೂಚಿಸುವವನಾಗಿದ್ದಾನೆ? ಆತನು ಪೇತ್ರನಿಗೆ "ನಂತರದಲ್ಲಿ ಅರಿತು ಕೊಳ್ಳುವಿ" ಎಂದು ಹೇಳಿದನು. ಪೇತ್ರ ಮತ್ತು ಇತರರು ನಂತರದಲ್ಲಿ ಘಟನೆಯಿಂದ ಅರ್ಥಮಾಡಿಕೊಂಡರೇ?

ಮೊದಲು, ಯೇಸು ಸೇವಕರ ಹಾಗಿರುವಂತೆ ಸೂಚಿಸುವವನಾಗಿದ್ದಾನೆ ಎಂಬುದನ್ನು ಆತನ ಶಿಷ್ಯರು ಅರಿತುಕೊಳ್ಳಲೇಬೇಕು. ಪಾದಗಳು ಸಾಮಾನ್ಯವಾಗಿ ಸೇವಕನಿಂದ ತೊಳೆಯಲ್ಪಡುತ್ತದೆ. ಹೀಗೆ ಯೇಸು ತನ್ನನ್ನು ತಾನು ಸೇವಕನ ಸ್ಥಾನಕ್ಕೆ ಇಳಿಸಿಕೊಂಡನು. (ನೋಡಿರಿ ಫಿಲಿಪ್ಪಿ 2:4-7.) ಅದರ ಬಗೆಗೆ ಯೋಚಿಸಿರಿ: ಸೃಷ್ಟಿಯ ನಿರ್ಮಾತೃ, ಮನುಕುಲದ ರಕ್ಷಕನೂ, ಅರಸರ ಅರಸನು, ಶಿಷ್ಯರ ಒಡೆಯನು ಮತ್ತು ಬೋಧಕನೂ ಮತ್ತು ಕರ್ತನೂ ಆದ ಆತನು ಗರ್ವದ ಶಿಷ್ಯರ ಮುಂದೆ ಆತನು ನಮ್ರನಾದ ಸೇವಕನೋ ಎಂಬಂತೆ ಬಾಗುವವನೂ ಆಗಿದ್ದಾನೆ.

ಎರಡನೆಯದು, ನಿಶ್ಚಿತವಾದ ಲಕ್ಷಣಗಳನ್ನು ಅವರ ಸೇವೆಯು ಹೊಂದಿರಬೇಕು ಎಂದು ಯೇಸು ಸೂಚಿಸುವುದನ್ನು ಅವರು ಅರಿತುಕೊಳ್ಳಲೇಬೇಕು. *ಯಾವುದು ಅವಶ್ಯವೋ ಅದನ್ನೇ ಯೇಸು ಮಾಡಿದನು.* ಶಿಷ್ಯರ ಪಾದಗಳು ಕೊಳೆಯಾಗಿದ್ದವು; ಆತನು ಅದನ್ನು ತೊಳೆದನು. ಆತನು ಆ ತಾಸಿನ ಅವಶ್ಯಕತೆಯನ್ನು ನೀಗಿಸಿದನು. *ಆ ಅವಶ್ಯಕತೆಯನ್ನು ನೀಗಿಸಲು ಯೇಸು ಕೆಳತರ ಕೆಲಸನ್ನು ಮಾಡಲು ಕೀಳಾದದ್ದುನ್ನು ಮಾಡಲು ಸಿದ್ಧನಾದನು.* ಪಾದಗಳನ್ನು ತೊಳೆಯುವ ಕಾರ್ಯಕ್ಕಿಂತ ಕೀಳಾದ ಕೆಲಸ ಇನ್ನೊಂದಿಲ್ಲ ಎಂದು ನಾನು ಭಾವಿಸುತ್ತೇನೆ. *ಕೆಲವೇ*

*ಕ್ಷಣಗಳಲ್ಲಿ ಆತನಿಂದ ಮುಖ ಓರೆಮಾಡಿಕೊಂಡು ಹೋಗುವವರಿಗೂ ಕೂಡಾ ಆತನು ಸೇವೆ ಮಾಡಿದನು.* ಆತನ ತನ್ನ ಪ್ರತಿಯೊಬ್ಬ ಶಿಷ್ಯರ ಪಾದಗಳನ್ನು ತೊಳೆಯುವ ಇಚ್ಛೆಯನ್ನು ವ್ಯಕ್ತಪಡಿಸಿದನು. ಇಷ್ಟರಲ್ಲೇ ಆತನನ್ನು ಅಲ್ಲಗಳೆಯಲಿರುವ ಪೇತ್ರನೂ ಕೂಡಾ ಅದರಲ್ಲಿ ಒಳಗೊಂಡಿದ್ದನು. ಆತನಿಗೆ ಗುರುದ್ರೋಹ ಎಸಗಿ ಆತನನ್ನು ಮರಣಕ್ಕೆ ತರುವ ಯೂದನನ್ನೂ ಕೂಡಾ ಅದು ಒಳಗೊಂಡಿತ್ತು. ಇದು "ಆತನನ್ನು ಬಿಟ್ಟು ಓಡಿಹೋದ" (ಮಾರ್ಕ 14:50) ಆತನ ಶಿಷ್ಯರನ್ನೂ ಕೂಡಾ ಅದು ಒಳಗೊಂಡಿತ್ತು.

ಮೂರನೆಯದಾಗಿ, ದೇವರ ರಾಜ್ಯದ ಶ್ರೇಷ್ಟತೆಯ ದೃಷ್ಟಿಕೋನವು ಅವರ ನಿರೀಕ್ಷಣೆಯ ಪ್ರಕಾರ ಯೇಸು ಸ್ಥಾಪಿಸಬೇಕಾದ ಲೋಕದ ರೀತಿಯ ರಾಜ್ಯದಿಂದ ಅವರು ಬಹುಶ ಪ್ರಭಾವಿತರಾಗಿರಬಹುದು. ಲೋಕದ ರೀತಿಯ ರಾಜ್ಯದಲ್ಲಿ, "ಅನ್ಯ ದೇಶದ ಅರಸರು ತಮ್ಮ ತಮ್ಮ ಜನಗಳ ಮೇಲೆ ದೊರೆತನಮಾಡುತ್ತಾರೆ" ಆದರೆ ಯೇಸು ಅದಕ್ಕೆ "ಆದರೆ ನೀವು ಹಾಗಿರಬಾರದು ..." ಎಂದು ಸೇರಿಸುತ್ತಾನೆ (ಲೂಕ 22:25, 26). ಮಾರ್ಕನು ಹೀಗೆ ಬರೆಯುತ್ತಾನೆ:

> ಯೇಸು ಅವರನ್ನು ಹತ್ತಿರಕ್ಕೆ ಕರೆದು ಅವರಿಗೆ ಜನಗಳನ್ನಾಳುವವರೆನಿಸಿಕೊಳ್ಳು ವವರು ಅವರ ಮೇಲೆ ಅಹಂಕಾರದಿಂದ ದೊರೆತನಮಾಡುತ್ತಾರೆ, ಮತ್ತು ಅವರಲ್ಲಿ ದೊಡ್ಡವರು ಬಲಾತ್ಕಾರದಿಂದ ಅಧಿಕಾರ ನಡೆಸುತ್ತಾರೆ ಎಂದು ನೀವು ಬಲ್ಲಿರಷ್ಟೆ; ಆದರೆ ನಿಮ್ಮಲ್ಲಿ ಹಾಗಾಗಬಾರದು ನಿಮ್ಮಲ್ಲಿ ದೊಡ್ಡವನಾಗ ಬೇಕೆಂದಿರುವವನು ನಿಮ್ಮ ಸೇವಕನಾಗಿರಬೇಕು; ನಿಮ್ಮಲ್ಲಿ ಮೊದಲನೆಯವನಾಗ ಬೇಕೆಂದಿರುವವನು ಎಲ್ಲರ ಆಳಾಗಿರಬೇಕು. ಮನುಷ್ಯಕುಮಾರನು ಸಹ ಸೇವೆ ಮಾಡಿಸಿಕೊಳ್ಳುವುದಕ್ಕೆ ಬರಲಿಲ್ಲ, ಸೇವೆಮಾಡುವುದಕ್ಕೂ, ಅನೇಕರನ್ನು ಬಿಡಿಸಿಕೊಳ್ಳುವುದಕ್ಕಾಗಿ ತನ್ನ ಪ್ರಾಣವನ್ನು ಈಡುಕೊಡುವುದಕ್ಕಾಗಿ ಬಂದನು ಎಂದು ಹೇಳಿದನು (ಮಾರ್ಕ 10:42-45).

ಕ್ರೈಸ್ತತ್ವದಲ್ಲಿ, ಮೇಲೆ ಹೋಗಬೇಕಾದರೆ ನಾವು ಕೆಳಗೆ ಬರಬೇಕಾಗಿದೆ! ಯಾರು ತನ್ನನ್ನು ತಾನು ದೀನನನ್ನಾಗಿಸಿಕೊಳ್ಳುತ್ತಾನೋ ಮತ್ತು ಸೇವಕನಂತಾಗುತ್ತಾನೋ ಅಂಥವನು ದೇವರ ರಾಜ್ಯದಲ್ಲಿ ಶ್ರೇಷ್ಟನು ಎಂದು ಎಣಿಸಲ್ಪಡುತ್ತಾನೆ.

ಮನುಷ್ಯನ ಮೇರೆಗೆ ಮಾತನಾಡುವುದಾದರೆ: ನಮ್ಮ ಸಮಯದಲ್ಲಿ ಕರ್ತನ ಸಭೆಯಲ್ಲಿ ಯಾರು ಶ್ರೇಷ್ಟರು ಎಂದು ಪರಲೋಕದಲ್ಲಿ ದೇವರು ಗುರುತಿಸುವುದಾದರೆ, ಆ ವ್ಯಕ್ತಿಯು ಯಾರಾಗಿರಬಹುದು? ಸಾವಿರಾರು ಜನರಿಗೆ ದೀಕ್ಷಾಸ್ನಾನ ಮಾಡಿಸಿದ ಶ್ರೇಷ್ಟ ಬೋಧಕರು ಅವಶ್ಯವಾಗಿ ಅಲ್ಲಿರಲೇ ಬೇಕಲ್ಲವೇ? ಸತ್ಯವನ್ನು ಬೋಧಿಸುವ ಡಜನ್‌ಗಟ್ಟಲೆ ಪುಸ್ತಕಗಳನ್ನುಬರೆದ ಲೇಖಕ ಆಗಿರಬೇಕಲ್ಲವೇ? ದೂರದರ್ಶನ ಅಥವಾ ಬಾನುಲಿಯ ಬೋಧಕರು? ವಾಕ್ಪಟು? ಒಬ್ಬ ಅದ್ಭುತ ಸಂಗೀತ ನಾಯಕ? ಯಾವುದಾರು ಸಹೋದರತ್ವದ ಸಭೆಯ ಒಬ್ಬ ಸಭಾಹಿರಿಯರು ಅಲ್ಲಿರಲೇಬೇಕು? ಹೆಚ್ಚಾಗಿ ಸಹೋದರತ್ವ ಸಂಪಾದಕೀಯದ ಮುಖ್ಯಾಂಶಗಳನ್ನು ಮಾಡುವವರು? ಕರ್ತನು ಯಾರನ್ನು ದೇವರ ರಾಜ್ಯದಲ್ಲಿ "ಶ್ರೇಷ್ಟರು" ಎಂದು ಘೋಷಿಸಬಹುದು? ಇವರನ್ನು ಬಿಟ್ಟು ಯಾರನ್ನಾದರೂ, ಯಾರೋ ಒಬ್ಬ ವಿಧವೆ ಆಗರಬಹುದು. ಅವಳ ನೆರೆಯಲ್ಲಿ ಮತ್ತು ಅವಳು ಹೋಗುವ ಸಭೆಯಲ್ಲಿ ಮಾತ್ರ ಅವಳು ಪರಿಚಯಿಸ್ಥಳು, ಹೊರತು ಬೇರೊಬ್ಬರಿಗಿಲ್ಲ. ಕರ್ತನು ಅವಳನ್ನು ಬಲ್ಲವನಾಗಿದ್ದಾನೆ ಹಾಗೂ ಆಕೆಯು ಅವಳ ಕುಟುಂಬ, ಅವಳ ಸ್ನೇಹಿತರು, ಅವಳ ನೆರೆಯವರು, ಕ್ರಿಸ್ತನಲ್ಲಿಯ ಸಹೋದ ರರು ಮತ್ತು ಸಭೆಯು - ಸ್ಥಳೀಯ ಸಭೆ ಜಗತ್ತಿನುದದಕ್ಕೂ ಇರುವ ಸಭೆ ಎರಡನ್ನೂ ಪ್ರೀತಿ ಸುವವಳೂ ಮತ್ತು ಸೇವೆಮಾಡುವುದಕ್ಕೋಸ್ಕರ ಜೀವಿಸುವುದನ್ನು ಅವರೂ ತಿಳಿದಿದ್ದಾರೆ. ಅವಳು ಒಳ್ಳೆಯ ಕಾರ್ಯಗಳಿಂದಾಗಿ ಶ್ರೀಮಂತಳಾಗಿದ್ದಾಳೆ ಮತ್ತು ಇತರರಿಗೆ ಸೇವೆಯನ್ನು ಮಾಡುವ ಮೂಲಕ ಕ್ರಿಸ್ತನಿಗೆ ಸೇವೆಯನ್ನು ಸಮರ್ಪಿಸಿದ್ದಾಳೆ.

ಸೇವೆ ಮಾಡುವುದಕ್ಕೋಸ್ಕರ ಮತ್ತು ಪರಲೋಕ ರಾಜ್ಯದಲ್ಲಿ ಶ್ರೇಷ್ಟರು ಎಂದು ಎಣಿಸುವುದಕ್ಕೆ ಇತರರಿಗೆ ಸೇವೆ ಮಾಡುವುದರ ಮೂಲಕವೇ ಎಂದು ಅರಿತುಕೊಳ್ಳುವಲ್ಲಿ ಆತನ ಶಿಷ್ಯರಿಗೆ ಯೇಸುವಿನ ಉದಾಹರಣೆಯು ಅವಶ್ಯವಾಗಿತ್ತು.

## ಯೇಸುವಿನ ಉದಾಹರಣೆಯು ನಮ್ಮಿಂದ ಏನನ್ನು ಅಪೇಕ್ಷಿಸುತ್ತದೆ?

ಮೂಲತಃವಾಗಿ, ಕರ್ತನು ಅಪೊಸ್ತಲರಿಂದ ಏನನ್ನು ಬಯಸಿದ್ದನೋ ಅದನ್ನೇ ಆತನು ನಮ್ಮಿಂದ ಬಯಸುವವನಾಗಿದ್ದಾನೆ. ನಿಮ್ಮನ್ನು ನೀವು ಅಪೋಸ್ತಲರ ಸ್ಥಾನದಲ್ಲಿ ಇರಿಸಿರಿ; ಯೇಸು ಅವರಿಗೆ ಏನು ಹೇಳಿದನೆಂದರೆ, "ನೀವು ಸಹ ಇನ್ನೊಬ್ಬರ ಪಾದಗ ಳನ್ನು ತೊಳೆಯಬೇಕು ... ನಾನು ಮಾಡಿದ ಹಾಗೆ ನೀವು ಮಾಡಿರೆಂದು ನಾನು ನಿನಗೆ ಈ ಉದಾಹರಣೆಯನ್ನು ಕೊಡುತ್ತೇನೆ ... ಹಾಗೆ ಮಾಡಿದ್ದಾದರೆ ನೀವು ಆಶೀರ್ವಾದ ಪ್ರದರಾಗುವಿರಿ." ನಾವೂ ಸಹ ಯೇಸುವನ್ನು ಈ ಉದಾಹರಣೆಗಳ ಮೂಲಕ, ಅನುಸರಿಸಬೇಕು - ಇತರರಿಗೆ ಸೇವೆಮಾಡುವ ಮೂಲಕ, ಇತರರಿಗೆ ಯಾವ ಅವಶ್ಯಕತೆ ಇದೆಯೋ ಅದನ್ನು ಪೂರ್ಣಮಾಡುವ ಮೂಲಕ, ದೇವರ ರಾಜ್ಯದಲ್ಲಿನ ಶ್ರೇಷ್ಟತೆಯನ್ನು ಗುರುತಿಸುವುದಾಗಿದ್ದು, ಆ ಶ್ರೇಷ್ಟತೆ ಅವಿಶ್ವಾಸಿಗಳಿಂದ ಉಪಯೋಗಿಸಲ್ಪಡುವ ಅಧಿಕಾರದಿಂದಲ್ಲ ಆದರೆ ಇತರರಿಗೆ ಮಾಡುವ ಸೇವೆಯಿಂದಲೇ.

ಯೇಸುವಿನ ಉದಾಹರಣೆಯನ್ನು ನಾವು ಹೇಗೆ ಅನುಸರಿಸಬೇಕು? ನಾವು ಸೇವೆಯನ್ನು ಮಾಡುವ ಉದ್ದೇಶವನ್ನು ಹೊಂದಿದಾಗ ಏನು ಮಾಡಬಹುದು? ಒಂದು ಸಂಗತಿಯೆಂದರೆ, ನಾವು ಸೇವಕನ ಕಾರ್ಯಗಳನ್ನು, ಆತನ ಕೀಳಾದ ಕೆಲಸಗಳನ್ನು, ಮಾಡಲು ಸಿದ್ಧರಾಗರಬೇಕು. ನಾವು ಇತರರಿಗೆ ಒಳ್ಳೆಯದನ್ನು ಮಾಡಲು ಸಿದ್ಧರಿರಬೇಕು, ಅವರು ಗರ್ವಿಷ್ಟರಿರಲಿ, ಅವರು ನಮ್ಮ ವೈರಿಗಳಾಗಿರಬಹುದು, ನಮ್ಮನ್ನು ನಿರಾಶೆಮಾಡಿದ ನಮ್ಮ ಸ್ನೇಹಿತರೂ ಇರಬಹುದು. ನಮ್ಮನ್ನು ಕೀಳಾಗಿ ಮಾಡುವ ಪ್ರಸಂಗ ನಮಗ ಬಂದರೂ ಕೂಡಾ ನಮ್ಮಷ್ಟಕ್ಕೆ ನಾವು ದೀನರಾಗಿರಬೇಕು. ಅವಶ್ಯವಿದ್ದರೆ, ಯೋಗ್ಯವಾದಂಥ, ಡಂಬಾಚಾರವಿಲ್ಲದೇ, ನಾವು ಒಬ್ಬಂಟಿಗರಾಗಿ ಸಹಾಯ ಮಾಡುವವರಾಗಿರಬೇಕು. ನಾವು ಚರ್ಚಿಗೆ ಸಹೋದರತ್ವಕ್ಕೆ ಸಹಾಯ ಮಾಡುತ್ತಿದ್ದೇವೆ, ನಾವು ಒಬ್ಬಂಟಿಗರಾಗಿ ಸಹಾಯ ಮಾಡುವವರಾಗಿರಬೇಕು. ನಾವು ಚರ್ಚಿಗೆ, ಸಹೋದರತ್ವಕ್ಕೆ ಸಹಾಯಮಾಡುತ್ತಿದ್ದೇವೆ, ನಾವು ಒಬ್ಬಂಟಿಗರಾಗಿ ಸಹಾಯ ಮಾಡುತ್ತಿದ್ದೇವೆ ಯಾಕೆಂದರೆ ನಾವು ಕ್ರೈಸ್ತರಾಗಿದ್ದೇವೆ ಮತ್ತು ತನ್ನ ರಕ್ಷಕನ ಸೇವೆಯನ್ನು ಅನುಸರಿಸುವದು ಕ್ರೈಸ್ತರ ಸ್ವಭಾವ ಆಗಿದೆ.

ಆ ರೀತಿಯಲ್ಲಿ ಸೇವೆ ಮಾಡುತ್ತಿರುವ ಜನರಿಗಾಗಿ ನಾನು ದೇವರಿಗೆ ಸ್ತೋತ್ರ ಹೇಳುತ್ತೇನೆ. ಒಬ್ಬ ಅತಿಥಿಯು ಅವರು ಹಾಗೆ ಮಾಡುವುದನ್ನು ಹಾಗೆಂದಿಗೂ ನೋಡಲಾರನು, ಆದರೆ ಅವರು ಎಂದೆಂದಿಗೂ ಸೇವೆಮಾಡುತ್ತಾರೆ. ಅಲ್ಲಿ ಗೈರಿದ್ದ ಕೆಲವರು ಸದಸ್ಯರನ್ನು ಅವರು ಕರೆದರು ಮತ್ತು ಬಾರದಿದ್ದಕ್ಕೆ ವಿಚಾರಿಸುವವರೂ ಆಗಿದ್ದರು. ಕೆಲವರು ಚರ್ಚಿನ ಕಚೇರಿಯ ಕೆಲಸವನ್ನು ಮಾಡುತ್ತಿರುತ್ತಾರೆ ಕೆಲವರು ಚರ್ಚನ್ನು ಸ್ವಚ್ಛ ಮಾಡುವವರೂ ಅಥವಾ ಹಾಡಿನ ಪುಸ್ತಕವನ್ನು ಎತ್ತಿಕೊಳ್ಳುವವರೂ ಮತ್ತು ಅದರ ಸ್ಥಳದಲ್ಲಿ ಇಡುವವರೂ ಆಗಿರುತ್ತಾರೆ. ಕೆಲವರು ಕಟ್ಟಡದ ಹೊರಗಡೆ ಉಸ್ತುವಾರಿ ಕೆಲಸಮಾಡುವವರೂ ಆಗಿರುತ್ತಾರೆ. ಚರ್ಚಿನ ಬುಲೆಟೆನ್ ಹೊರತರುವ ಕಾರ್ಯದಲ್ಲಿ ಕೆಲವರು ತೊಡಗಿರುತ್ತಾರೆ. ಕೆಲ ಚರ್ಚ ಹಿರಿಯರು ಇತರರನ್ನು ಭೇಟಿಮಾಡುವಲ್ಲಿ ಮತ್ತು ಚರ್ಚ್ ಕೆಲಸದ ಬಗೆಗೆ ಚರ್ಚೆಮಾಡುಲ್ಲಿ ಸಮಯವನ್ನು ಕಳೆಯುತ್ತಾರೆ. ಕೆಲವರು ಬೈಬಲ್ ಸ್ಕೂಲ್ ಕಾರ್ಯಕ್ರಮವನ್ನು ನಿರ್ದೇಷಿಸುವಲ್ಲಿ ಮತ್ತು ಬೋಧಿಸುವುದರಲ್ಲಿ ಸೇವೆಮಾಡುತ್ತಾರೆ. ಕೆಲವರು ರಾತ್ರಿ ಭೋಜನವನ್ನು ಸಿದ್ಧಮಾಡುತ್ತಾರೆ. ಕೆಲವರು ಅನಾಥರ ಅವಶ್ಯಕತೆಗಳನ್ನು ಒಂದು ರೀತಿಯಲ್ಲಿ ಅಥವಾ ಇನ್ನೊಂದು ರೀತಿಯಲ್ಲಿ ಪೂರೈಸುತ್ತಾನೆ. ಕೆಲವರು ಶಿಶುವಿಹಾರದ ಮೇಲ್ವಿಚಾರಣೆ ಮಾಡುತ್ತಾರೆ. ಅವಶ್ಯವಿದ್ದರಿಗೆ

ಅಥವಾ ಶವಸಂಸ್ಕಾರದಲ್ಲಿ ಭಾಗಿಯಾದವರಿಗೆ ಕೆಲವರು ಆಹಾರವನ್ನು ತರುತ್ತಾರೆ ಮತ್ತು ಕೆಲವರು ರೋಗಿಗಳಿಗೆ, ಅಥವಾ ರೋಗಿಗಳನ್ನು ಅಥವಾ ವಿಯೋಗಿಗಳನ್ನು ಭೇಟಿಯಾಗುವಲ್ಲಿ ಆಹಾರವನ್ನು ಕೊಡುವುದರ ಮೂಲಕ, ಕೆಲವರು ಇತರರನ್ನು ಬೋಧಿಸಲು ಅಥವಾ ನಂಬಿಕೆಯಲ್ಲಿ ಪ್ರೋತ್ಸಾಹಿಸಲು ಅಥವಾ ಕರ್ತನೆಡೆಗೆ ಪರಿವರ್ತಿರಾಗಲು ತಮ್ಮ ಮನೆಯಲ್ಲಿ ಇರಿಸಿಕೊಳ್ಳುತ್ತಾರೆ. ಕೆಲವರು ಕೇವಲ ಇತರರನ್ನ ಗಮನಿಸುವಲ್ಲಿ ಮತ್ತು ಅವರ ಅವಶ್ಯಕತೆಯನ್ನು ಪೂರೈಸುವಲ್ಲಿ ಅಥವಾ ಅವರೊಡನೆ ಕರುಣೆಯಿಂದ ಮಾತನಾಡುತ್ತಾ ಪ್ರೋತ್ಸಾಹಿಸುವಲ್ಲಿ ಸೇವೆಯಲ್ಲಿ ಮಾಡುವವರಾಗಿರುತ್ತಾರೆ.

ಅವರ ಉದಾಹರಣೆ ನಾನು ಮಾನ್ಯಮಾಡುವವನಾಗಿದ್ದೇನೆ. ಹೋಗು ಅದರಂತೆ ಮಾಡು.

## ಮುಕ್ತಾಯ

ಸೇವೆಯೇ ಶ್ರೇಷ್ಟವಾದ ಮಾರ್ಗ ಎಂದು ಪ್ರತಿಯೊಬ್ಬ ವ್ಯಕ್ತಿಯು ಅರಿತಲ್ಲಿ ಚರ್ಚಿನಲ್ಲಿಯ ಮತ್ತು ಜಗತ್ತಿನಲ್ಲಿಯ ದೊಡ್ಡ ಸಮಸ್ಯೆಯು ಪರಿಹಾರವಾಗಬಹುದು. ದೊಡ್ಡ ಸಮಸ್ಯೆಯು ಯಾವಾಗಲೂ ಯಾರು “ಶ್ರೇಷ್ಟರು” ಎಂದು ಕರೆಯಲ್ಪಡುತ್ತಾರೆ? ಯಾರು ಅಧಿಕಾರವನ್ನು ವಹಿಸಿಕೊಳ್ಳುತ್ತಾರೆ? ಯಾರು ಗುರುತರವಾದ ಪ್ರಶಸ್ತಿಯನ್ನು ಪಡೆಯುತ್ತಾರೆ? ಎಂಬ ಪ್ರಶ್ನೆಗೆ ಸಂಬಂಧಿಸಿದವುಗಳು ಆಗಿರುತ್ತವೆ. ಈ ಮಾರ್ಗದಲ್ಲಿ ನಾವು ಶೋಧನೆಯನ್ನು ನಿಯಂತ್ರಿಸಿದ್ದೇ ನೆ. ಆದರೆ, ಸಂಘರ್ಷಗಳು ಏಳುವ ಮುನ್ನವೇ ಪರಿಹಾರವಾಗಬಹುದು.

ಕ್ರಿಸ್ತೀಯ ಚಿಹ್ನೆಯು ಏನಾಗಿರಬೇಕು? ಗೋದಲಿಯೋ? ಕ್ರೂಜೆಯೋ? ಕಿರೀಟವೋ? ಕೈಪಾವುಡದ ಬಗೆಗೆ ನಿಮಗೇನನ್ನಿಸುತ್ತದೆ? ನಮ್ಮ ರಕ್ಷಕನು ಮೊಣಕಾಲೂರಿ ಶಿಷ್ಯರ ಪಾದಗಳನ್ನು ತೊಳೆಯುವದನ್ನು ನೋಡಿದ ನಂತರ, ನಮ್ಮ ಕೈಪಾವುಡವನ್ನು ಮೇಲೆ ಇಡುವುದನ್ನೂ ಮತ್ತು ಮನುಕುಲದವರೆಲ್ಲಾ ಒಬ್ಬರಿಗೊಬ್ಬರು ಸೇವೆಮಾಡಬೇಕು ಎಂದೂ ನಾನು ಸೂಚಿಸುವವನಾಗಿದ್ದೇನೆ. ಒಂದು ವೇಳೆ ಯೇಸು ತನ್ನ ಕೈಪಾಡುವನ್ನು ಹಾಕಿ ನಿನ್ನ ಕಾಲು ತೊಳೆಯಲು ಸಿದ್ಧನಿರುವುದಾದರೆ ನಿನ್ನ ಕೈಪಾವುಡವನ್ನು ಇತರರ ಮೇಲೆ ಹಾಕಿ ಯೇಸು ತನ್ನ ಶಿಷ್ಯರಿಗೆ ಮಾಡಿದಂತೆ ನೀನು ಸೇವೆಮಾಡುವಲ್ಲಿ ಯಾಕೆ ಗರ್ವಪಟ್ಟುಕೊಳ್ಳುತ್ತೀ?

ನೀನೂ ಕೂಡ ಸೇವ ಮಾಡಬಯಸುತ್ತಿಯೋ? ಕ್ರಿಸ್ತನ ಶಿಷ್ಯನಾಗಲು ಆತನ ಸಭೆಯ ಮೂಲಕ ಇತರರಿಗೆ ಸೇವೆಮಾಡು.